ಕ್ರಿಮಿನಲ್ ಕೇಸ್ ನಂ.102/2020
ಪ್ರಾ.ಸಾ.ಃ 1

ಸಾಕ್ಷಿಗೆ ದಿನಾಂಕ ಃ-29-06-2022 ರಂದು ಪ್ರಮಾಣಿಕರಿಸಲಾಯಿತು.

<u>ಪಾಟೀ ಸವಾಲು ಃ ಶ್ರೀ ಎಸ್ ಬಿ ಪಿ ವಕೀಲರಿಂದ</u>

ನಾನು ರೇಡಿಯಟರ್ ಮಾರಾಟ ಮತ್ತು ಅದರ ಕುರಿತು ಮಾರಾಟ ಮತ್ತು ಸರ್ವಿಸ್ ಮಾಡುತ್ತೇನೆ. ಸದರಿ ವ್ಯಾಪಾರಕ್ಕೋಸ್ಕರ ಟಿನ್ ನಂಬರ ಪಡೆದುಕೊಂಡಿಲ್ಲ ಆದರೆ ಪುರಸಭೆ ಪರವಾನಿಗೆ ಇದೆ. ಟಿನ್ ನಂಬರ ಇಲ್ಲದೇ ಇದ್ದರ ಪುರಸಭೆಯವರ ಪರವಾನಿಗೆ ನೀಡುವುದಿಲ್ಲ ಎಂದರೆ ಸರಿಯಲ್ಲ. ಪುರಸಭೆಯವರು ಕೊಟ್ಟ ಪರವಾನಿಗೆ ಪತ್ರ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.ಸದರಿ ಹಣದ ವ್ಯವಹಾರ ವ್ಯಾಪಾರಕ್ಕೋಸ್ಕರ ನನ್ನ ಉಳಿತಾಯ ಖಾತೆಯಿಂದ ಜಮೆ ಮಾಡಿ ಅದರಲ್ಲಿ ವ್ಯವಹಾರ ಆಗುತ್ತದೆ. ನಾನು ವ್ಯವಸಾಯ ಮಾಡುವುದಿಲ್ಲ ಮತ್ತು ನನ್ನ ಜಮೀನು ಇರುವುದಿಲ್ಲ. ಆದರೆ ರೀಯಲ್ ಎಸ್ಟೇಟ್ ವ್ಯಾಪಾರ ಮಾಡುತ್ತೇನೆ. ರೀಯಲ್ ಎಸ್ಟೇಟ್ ವ್ಯಾಪಾರ ಎಂದರೆ ಜಮೀನುಗಳನ್ನು ಖರೀದಿ ಮಾಡಿ ನಿವೇಶನ ಮಾಡಿ ಮಾರಾಟ ಮಾಡುವುದು. ಸದರಿ ಆ ವ್ಯಾಪಾರದ ಕುರಿತಾಗಿ ಯಾವುದೇ ಪರವಾನಿಗೆ ದಾಖಲೆಗಳನ್ನು ನಾನು ಸರ್ಕಾರದಿಂದ ಪಡೆದುಕೊಂಡಿಲ್ಲ.

2. ನಾನು ಆ ವ್ಯಾಪಾರದ ಕುರಿತು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಕಾರಣ ನಾನು ಏಜೆಂಟ್ ಆಗಿರುತ್ತೇನೆ. ಆರೋಪಿಗೆ ನಾನು 5 ಲಕ್ಷ ರೂಪಾಯಿ ಹಣವನ್ನು ನನ್ನ ಉಳಿತಾಯ ಖಾತೆಯಿಂದ ತೆಗೆದು ನೀಡಿರುತ್ತೇನೆ. ದಿನಾಂಕ 13-12-2019 ರಂದು ಉಳಿತಾಯ ಖಾತೆಯಿಂದ ತೆಗೆದಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆರೋಪಿಗೆ ಹಣದ ಅಡಚಣೆ ಇದ್ದ ಕಾರಣ ಹಣ ನೀಡಿರುತ್ತೇನೆ. ಆತನಿಗೆ ಯಾವ ಅಡಚಣೆ ಇದೆ ಎಂದು ನನಗೆ ಗೊತ್ತಿಲ್ಲ. ನಿ.ಪಿ. 1 ರಲ್ಲಿ ಹೆಸರನ್ನು ದಪ್ಪ ಮಸಿ ಇಂಕನಿಂದ ಬರೆದಿದ್ದು ಉಳಿದಿದ್ದು ಕಡಿಮೆ ಮಸಿ ಇಂಕನಿಂದ ಬರೆದಿದ್ದು ಇದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಆತನೆ ಬರೆದುಕೊಟ್ಟಿರುತ್ತಾನೆ ಎಂದುಹೇಳುತ್ತಾನೆ. ದಿನಾಂಕ ಬೇರೆ ಪೆನ್ನಿನಿಂದ ಬರೆದಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಆತನ ಬರೆದುಕೊಟ್ಟ ತಂದು ಕೊಟ್ಟಿರುತ್ತಾನೆ ನಂತರ ನಾನು ಬ್ಯಾಂಕಗೆ ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಾರೆ.

**<u>ಮುಂದುವರೆದ ಪಾಟೀ ಸವಾಲಿಗೆ ಮುಂದುಡಲಾಯಿತು.</u>**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ